ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 12.03.2024.

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ನಿಡಿ-1 ಮತ್ತು ನಿಡಿ-2 ರಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಡಿ-1(ಇ) ಮತ್ತು ನಿಡಿ-2(ಕೆ) ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲು: 3 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಬಿ.ಎ.ಡಿ. ವಕೀಲರಿಂದ:**

ನಿಡಿ-1 ಮತ್ತು ನಿಡಿ-2 ರ ವಾಟ್ನಿ ಪತ್ರಗಳನ್ನು 1 ನೇ ಪ್ರತಿವಾದಿ ಕೇವಲ ಸರ್ಕಾರದಿಂದ ಸೌಲಭ್ಯ ಪಡೆಯುವ ಸಲುವಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾಟ್ನಿ ಪತ್ರದ ಪ್ರಕಾರ ಪಹಣಿಗಳಲ್ಲಿ ಅಮಲು ಬಜಾವಣೆ ಆಗಿದಿಯೋ ಇಲ್ಲಯೋ ನನಗೆ ಗೊತ್ತಿಲ್ಲ. ಸದರಿ ವಾಟ್ನಿ ಪತ್ರದ ಪ್ರಕಾರ ಕಂದಾಯ ದಾಖಲೆಗಳಲ್ಲಿ ಯಾವುದೇ ಅಮಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-1 ಮತ್ತು ನಿಡಿ-2 ವಾಟ್ನಿ ಪತ್ರಗಳು ಕಾನೂನು ಬದ್ಧವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-1 ಮತ್ತು ನಿಡಿ-2 ವಾಟ್ನಿ ಪತ್ರದ ಪ್ರಕಾರ 3 ಮತ್ತು 5 ನೇ ಪ್ರತಿವಾದಿಯರ ಹಕ್ಕು ಹೋಗಿಲ್ಲ ಎಂದರೆ ಸರಿಯಲ್ಲ.

ನಿಡಿ-1 ಮತ್ತು ನಿಡಿ-2 ವಾಟ್ನಿ ಪತ್ರದ ಪ್ರಕಾರ ಹಣವನ್ನು ನನ್ನ ಸಮಕ್ಷಮ ಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೆ ಹೋದ ಆಸ್ತಿಗಳಲ್ಲಿ ಅವರು

ತಿರಿಕೊಂಡ ನಂತರ 3 ಮತ್ತು 4 ನೇ ಪ್ರತಿವಾದಿಯರು ತಮ್ಮ-ತಮ್ಮಲ್ಲಿ ಹಂಚಿಕೊಂಡಿರುತ್ತಾರೆ. ಸದರಿ 3 ಮತ್ತು 4 ನೇ ಪ್ರತಿವಾದಿಯರು ಹೆಂಚಿಕೊಂಡು ವಿಷಯ ನನ್ನ ಸಮಕ್ಷಮ ಆಗಿಲ್ಲ. ಸದರಿ 3 ಮತ್ತು 4 ನೇ ಪ್ರತಿವಾದಿಯರು ಸದರಿ ತಂದೆ-ತಾಯಿಗಳಿಗೆ ಬಂದ ಭಾಗವನ್ನು ಅಂದರೆ ಸರ್ವೆ ನಂ.301/1 ರ 18 ಎಕರೆ 4 ಗುಂಟೆ ಜಮೀನನ್ನು ಯಾವ ರೀತಿ ಹಂಚಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ 3 ಮತ್ತು 4 ನೇ ಪ್ರತಿವಾದಿಗಳು ಹಂಚಿಕೊಂಡಿರುತ್ತಾರೆ ಎಂದು ನಾನು ಹೇಳಿಲ್ಲ, ಆದರೆ ಹಂಚಿಕೊಳ್ಳಬೇಕು ಎಂದು ಹೇಳಿರುತ್ತೇನೆ.

1 ನೇ ಪ್ರತಿವಾದಿ 2 ನೇ ಬಾರಿ ಕರೆಯಿಸಿದಾಗ ಅಲ್ಲಿ ಕಾಗದ ಪತ್ರ ಬರೆದಿರುತ್ತಾರೆ. ಸದರಿ ಕಾಗದ ಪತ್ರವನ್ನು ಛಾಪಾಕಾಗದದಲ್ಲಿ ಬರೆದಿರುತ್ತಾರೆ. ಸದರಿ ದಾಖಲೆಯನ್ನು ಮಲ್ಲಿಕಾರ್ಜುನ ಬೀರಾದಾರ ರವರು ಕನ್ನಡದಲ್ಲಿ ಬರೆದಿರಬಹುದು, ಆದರೆ ನಾನು ಸದರಿ ದಾಖಲೆಯನ್ನು ಇವತ್ತು ನೋಡಿಲ್ಲ, ಆದರೆ ಹಿಂದೆ ಸಹಿ ಮಾಡಿದ ದಿನ ನೋಡಿರುತ್ತೇನೆ. 4 ನೇ ಪ್ರತಿವಾದಿ 3 ನೇ ಪ್ರತಿವಾದಿಯಿಂದ ರೂ.40,000/- ಹಣವನ್ನು ಪಡೆದುಕೊಂಡಿರುತ್ತಾರೆ ಮತ್ತು 4 ನೇ ಪ್ರತಿವಾದಿಯೇ ಸದರಿ ಎಲ್ಲ ಮನೆಯ ಸಂಪೂರ್ಣ ಕಬ್ಜೆ ಇರುತ್ತಾನೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ.

2 ನೇ ಬಾರಿ ದಾಖಲೆ ಬರೆದಾಗ 5 ನೇ ಪ್ರತಿವಾದಿ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ಹಕ್ಕು ಇದೆ ಎಂಬ ಬಗ್ಗೆ ಯಾವುದೆ ವಿಚಾರ ಮಾಡಿಲ್ಲ ಎಂದರೆ, ಸಾಕ್ಷಿ ರೂ.40,000/- ಹಣ ಪಡೆದುಕೊಂಡು ಕಡಿಗೆ ಆಗಿರುತ್ತಾಳೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ 5 ನೇ ಪ್ರತಿವಾದಿಗೆ ರೂ.40,000/- ಕೊಟ್ಟ

ಹಣದ ಬಗ್ಗೆ ಬರೆಯಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳಮದ್ಯ ಯಾವುದೇ ವಾಟ್ನಿಯಾಗಿಲ್ಲ ಹಾಗೂ ನನಗೆ ಯಾವುದೇ ಮಾಹಿತಿಇರದೇ ಇದ್ದರೂ ಕೂಡಾ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** <u>ವಾದಿ ಪರ ಶ್ರೀ ಕೆ.ಪಿ.ಟಿ. ವಕೀಲರಿಂದಃ</u>

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**